ದಿನಾಂಕಃ 01-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಸಿ ಎಮ್ ಕೆ ವಕೀಲರಿಂದಃ</u>

3. ಈ ದಾವೆಯನ್ನು ನಾನು ಪ್ರತಿವಾದಿಗಳ ಮೇಲೆ ಆಸ್ತಿಯಲ್ಲಿ ಭಾಗ ಕೇಳಿ ಹಾಕಿದ್ದೇನೆ. ದಾವಾ ವಾದ ಪತ್ರ ತಯಾರಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ರವಿಗೌಡ ತೀರಿಕೊಂಡಿರುತ್ತಾರೆ. ಅವರಿಗೆ ಮಗ ಇಲ್ಲ. ರವಿಗೌಡನಿಗೆ ಲತಾ ಎಂಬ ಹೆಂಡತಿ ಇದ್ದಾಳೆ ಎಂದರೆ ಇಲ್ಲ. ಊರಿನಲ್ಲಿ ಹೇಳಿಕೊಂಡು ತಿರುಗಾಡುತ್ತಾರೆ. ಈಶ್ವರಗೌಡನು ರವಿಗೌಡ ಹಾಗೂ ಲತಾ ಇವರ ಮಗ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ರವಿಗೌಡನ ತಾಯಿ ಎಂದರೆ ಸರಿ. ರವಿಗೌಡ ಮತ್ತು 2 ನೆ ಪ್ರತಿವಾದಿ ಕಳಸ ಗ್ರಾಮದಲ್ಲಿ ಒಂದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಯೇ ಲತಾಳ ಮದುವೆಯನ್ನು ರವಿಗೌಡನ ಜೊತೆಗೆ ಮಾಡಿಸಿದ್ದಳು ಎಂದರೆ ಸರಿಯಲ್ಲ. ನನ್ನ ಜೊತೆ ಮಾಡಿಸಿದ್ದಳು. ಸದರಿ ಲತಾ ಈ ದಾವಾದ 5 ನೇ ಪ್ರತಿವಾದಿ ಎಂದರೆ ನಾನು ಸೇರಿಸಿಲ್ಲ. ಇವತ್ತಿಗೂ 2, 5 ನೇ ಪ್ರತಿವಾದಿ ಮತ್ತು 1 ಎ ಪ್ರತಿವಾದಿ ಕಳಸ ಗ್ರಾಮದಲ್ಲಿ ಒಂದೇ ಮನೆಯಲ್ಲಿ ವಾಸವಿದ್ದಾರೆ ಎಂದರೆ ಗೊತ್ತಿಲ್ಲ. 3 ಮತ್ತು 4 ನೇ ಪ್ರತಿವಾದಿಗಳು ತವರು ಮನೆಗೆ ಬಂದು ಹೋಗಿ ಮಾಡುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ ಮದುವೆ ಆಗಿದೆ. ಆಕೆಯನ್ನು ಗುತ್ತಲ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನಾನು ಸದರಿ ಮದುವೆಗೆ ಹೋಗಿದ್ದೆ. ಸದರಿ ಮದುವೆಯಲ್ಲಿ ಫೋಟೋ ಹಾಗೂ ವಿಡಿಯೋ ಚಿತ್ರೀಕರಣ ಮಾಡಲಾಗಿತ್ತಾ ಎಂದರೆ ಇಲ್ಲ. ಮದುವೆ ಹೋಗಿದ್ದೆ ಎನ್ನುವ ಸಂಬಂಧ ದಾಖಲೆ ಇದೆಯಾ ಎಂದರೆ ಇಲ್ಲ. 4 ನೇ ಪ್ರತಿವಾದಿ ಮದುವೆಗೆ ನನ್ನನ್ನು ಯಾರು ಕರೆದಿಲ್ಲ. ನಾನು ಹೋಗಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮದುವೆ ಆಗಿ 4 ವರ್ಷ ಆಗಿದೆ. ದಾವಾ ದಾಖಲು ಮಾಡುವಾಗ ಆಕೆಯ ಮದುವೆ ಆಗಿತ್ತು. 4 ನೇ ಪ್ರತಿವಾದಿ ಮದುವೆ ಆಗಿ 3 ವರ್ಷಗಳ ನಂತರ ಈ ದಾವೆಯನ್ನು ಹಾಕಿದ್ದೇನೆ. ಆಕೆಯ ಗಂಡನ ಹೆಸರು ಮತ್ತು ಮನೆ ಹೆಸರು ನನಗೆ ಗೊತ್ತಿಲ್ಲ.

4. 3 ನೇ ಪ್ರತಿವಾದಿ ಮದುವೆ ಆಗಿ ಸುಮಾರು 25 ವರ್ಷಗಳಾಗಿವೆ. ಸದರಿ ಮದುವೆಗೆ ನಾನು ಹೋಗಿಲ್ಲ. ಆಕೆಯ ಗಂಡನ ಹೆಸರು ಅಖಂಡಪ್ಪ ಪಾಟೀಲ. ದಾವಾ ಹಾಕುವಾಗ ವಕೀಲರಿಗೆ ಆಕೆಯ ಗಂಡನ ಹೆಸರು ಹೇಳಿದ್ದೆ. 2 ರಿಂದ 4 ನೇ ಪ್ರತಿವಾದಿಗಳು ಹಾಗೂ ನನ್ನ ಸಂಬಂಧ ಹೇಗಿದೆ ಎಂದರೆ ಚೆನ್ನಾಗಿದೆ. 3 ನೇ ಪ್ರತಿವಾದಿ ಸಲ್ಲಿಸಿರುವ ತಕರಾರು ಓದಿ ನೋಡಿದ್ದೀರಾ ಎಂದರೆ ಇಲ್ಲ. ಸದರಿ ತಕರಾರನ್ನು 2 ಮತ್ತು 4 ನೇ ಪ್ರತಿವಾದಿಗಳು ಅನುಸರಿಸಿ ಸೂಚನಾ ಪತ್ರ ಹಾಕಿರುವುದು ನನಗೆ

ಗೊತ್ತಿಲ್ಲ. 5 ನೇ ಪ್ರತಿವಾದಿ ಯಾವುದೇ ತಕರಾರು ಹಾಕಿಲ್ಲ. ಈಶ್ವರಗೌಡನ ತಾಯಿ ಲತಾ ಎಂದರೆ ಸರಿ. ಈಶ್ವರಗೌಡನ ತಂದೆಯ ಹೆಸರು ರವಿಗೌಡ. ಈಶ್ವರಗೌಡ ಅಪ್ರಾಪ್ತ ವಯಸ್ಕನಿದ್ದಾನೆ ಎಂದರೆ ಸರಿ. ಆತನ ಜೋಪಾನ ಹಾಗೂ ಜತನ ಲತಾ ಮಾಡುತ್ತಾಳೆ ಎಂದರೆ ಸರಿಯಲ್ಲ. ನಾನು ಮಾಡುತ್ತೇನೆ ಎಂದು ನುಡಿಯುತ್ತಾರೆ. ಅವರ ತಾಯಿ ಇದ್ದರೂ ಸಹ ನೀವು ಏಕೆ ಜೋಪಾನ ಮಾಡುತ್ತೀರಾ ಎಂದರೆ ಸಾಕ್ಷಿ ಮೌನ ವಹಿಸಿರುತ್ತಾರೆ. 1 ಎ ಪ್ರತಿವಾದಿ ತನ್ನ ತಾಯಿಯ ಮೂಲಕ ಪ್ರತಿವಾದ ಪತ್ರ ಹಾಕಿದ್ದಾರೆ ಎಂದರೆ ಗೊತ್ತಿಲ್ಲ.

5. ನನ್ನ ತವರು ಮನೆ ಕುಂದಗೋಳ ತಾಲೂಕಿನ ಸುಲ್ತಾನಪೂರ. ನಮ್ಮದು ಗಾಣೀಗರ ಸಮಾಜ. ರವಿಗೌಡ ಸಹ ಗಾಣೀಗೇರ ಸಮಾಜಕ್ಕೆ ಸೇರಿದವರು. ನಾನು ಗಾಣೀಗೇರ ಸಮಾಜಕ್ಕೆ ಸೇರಿದವರು ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ತಂದೆಯ ಹೆಸರು ಶಂಕ್ರಪ್ಪ. ಅವರ ತಂದೆ ಹುಚ್ಚಪ್ಪ ಹೂಗಾರ. ಹೂಗಾರ ಮನೆತನದವರು ಗಾಣೀಗೇರ ಸಮಾಜಕ್ಕೆ ಸೇರಿದವರಲ್ಲ ಎಂದರೆ ಸರಿ. 5 ನೇ ಪ್ರತಿವಾದಿ ಗಾಣೀಗೇರ ಸಮಾಜಕ್ಕೆ ಸೇರಿದವಳು ಎಂದರೆ ಗೊತ್ತಿಲ್ಲ. 5 ನೇ ಪ್ರತಿವಾದಿ ಲತಾ ರವಿಗೌಡನ ಕಾನೂನು ಬದ್ಧ ಹೆಂಡತಿ ಎಂದರೆ ಸರಿಯಲ್ಲ. ನಾನು ಮೊದಲನೇ ಹೆಂಡತಿ ಎಂದು ನುಡಿಯುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರವಿಗೌಡನ ಹೆಂಡತಿ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಭಾವ ಚಿತ್ರ ಇದೆ. ನಿಪಿ. 11 ರ ಭಾವ ಚಿತ್ರವನ್ನು ಕಪ್ಪತ್ತಗುಡ್ಡದಲ್ಲಿ ತೆಗೆಸಿರುತ್ತೇವೆ. ಭಾವ ಚಿತ್ರವನ್ನು ಮದುವೆಯ ಸಮಾರಂಭಕ್ಕೆ ತೆಗೆಸಿರುತ್ತೇವೆ. ಸ್ಟುಡಿಯೋದವರು ತೆಗೆದಿರುತ್ತಾರೆ. ಅವರ ಹೆಸರು ಮತ್ತು ವಿಳಾಸ ಗೊತ್ತಿಲ್ಲ. ನಿಪಿ. 11 ರ ನೆಗೆಟೀವ್ ಹಾಗೂ ರಸೀದಿ ಇದೆಯಾ ಎಂದರೆ ಇಲ್ಲ. ಮದುವೆಯ ಸಮಾರಂಭದಲ್ಲಿ ವಧು ಮತ್ತು ವರನ ತಲೆಗೆ ಭಾಸಿಂಗ ಕಟ್ಟಿರುತ್ತಾರೆ ಎಂದರೆ ಸರಿ. ನಿಪಿ. 11 ರಲ್ಲಿ ಭಾಸಿಂಗ ಕಾಣುತ್ತಿಲ್ಲ ಎಂದರೆ ಸರಿ. ಸದರಿ ಭಾವ ಚಿತ್ರಗಳು ಮನೆಯಲ್ಲಿವೆ. ಅದನ್ನು ಹಾಜರು ಪಡಿಸುತ್ತಿರಾ ಎಂದರೆ ಮನೆಯಲ್ಲಿ ಸಿಕ್ಕಿದರೆ ಹಾಜರು ಪಡಿಸುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ